**ಸ್ಮೃತಿಸಂಚಯ**

# ನಿತ್ಯಜೀವನದಲ್ಲಿ ಆಧ್ಯಾತ್ಮಿಕತೆ

ಸ್ವಾಮಿ ಸ್ಮರಣಾನಂದ

**ಯಾ**ರು ತನ್ನ ಅಂತರಂಗದಲ್ಲಿರುವ ಪರಮಸತ್ಯವನ್ನು ಅರಿತುಕೊಂಡು, ಅವನ್ನೇ ಸೃಷ್ಟಿಯಲ್ಲಿರುವ ಎಲ್ಲಾ ಸಂಗತಿಗಳಲ್ಲೂ ಕಾಣುತ್ತಾನೆಯೋ ಅವನನ್ನು ಸ್ಥಿತಪ್ರಜ್ಞ ಎಂದು ಭಗವದ್ಗೀತೆಯು ಕರೆದಿದೆ (ಭಗವದ್ಗೀತೆ, ೨ ನೆ ಅಧ್ಯಾಯ). ಶ್ರೀಕೃಷ್ಣನು ಅಂಥವನು ಹೇಗೆ ವರ್ತಿಸುತ್ತಾನೆ, ಯಾವ ರೀತಿ ಮಾತನಾಡುತ್ತಾನೆ, ಹೇಗೆ ಕುಳಿತುಕೊಳ್ಳುತ್ತಾನೆ ಹಾಗೂ ತನ್ನ ಸುತ್ತಮುತ್ತಲ ಜನರ ಜೊತೆಗೆ ಹೇಗೆ ಒಡನಾಡುತ್ತಾನೆ ಎನ್ನುವ ಅಂಶವನ್ನು ಅರ್ಜುನನಿಗೆ ತಿಳಿಯಹೇಳುತ್ತಾನೆ. ಒಬ್ಬ ನಿಜವಾದ ಭಕ್ತನ ಅಥವಾ ಉಪಾಸಕನ ನಡವಳಿಕೆಯನ್ನು ಭಗವದ್ಗೀತೆಯ ಹನ್ನೆರಡನೆಯ ಅಧ್ಯಾಯವು ವಿವರಿಸುತ್ತದೆ. ಅದೇ ರೀತಿಯಲ್ಲಿ ಭಗವದ್ಗೀತೆಯ ಹದಿನಾಲ್ಕನೆಯ ಅಧ್ಯಾಯದಲ್ಲಿ, ಸತ್ವ, ರಜಸ್ಸು ಮತ್ತು ತಮಸ್ಸುಗಳನ್ನು ದಾಟಿದ ತ್ರಿಗುಣಾತೀತನ ಅವಸ್ಥೆಯನ್ನು ವರ್ಣಿಸಲಾಗಿದೆ.

ಈ ನೆಲೆಗಳಲ್ಲಿ ಇರುವ ವ್ಯಕ್ತಿಗಳು ಅಸಾಧಾರಣ ಅಧ್ಯಾತ್ಮವ್ಯಕ್ತಿತ್ವವುಳ್ಳವರು. ಅವರು ಸಂಸಾರಸಾಗರ ಅಂದರೆ ಈ ಸಾಪೇಕ್ಷ ಅಸ್ತಿತ್ವದ ಸ್ಥಿತಿಯನ್ನು ದಾಟಿದವರು. ಈ ಭುವಿಯಲ್ಲಿ ಅವರ ಇರುವಿಕೆಯೇ ಅತ್ಯಂತ ಪವಿತ್ರವಾದುದು.

**ಕುಲಂ ಪವಿತ್ರಂ ಜನನೀ ಕೃತಾರ್ಥಾ**
**ವಿಶ್ವಂಭರಾ ಪುಣ್ಯವತೀ ಚ ತೇನ ।**
**ಅಪಾರ ಸಂವಿತ್ ಸುಖಸಾಗರೇಽಸ್ಮಿನ್**
**ಲೀನಂ ಪರೇ ಬ್ರಹ್ಮಣಿ ಯಸ್ಯ ಚೇತಾಃ ॥**

"ಯಾರ ಮನಸ್ಸು, ಬ್ರಹ್ಮನಲ್ಲಿ ವಿಲೀನಗೊಳ್ಳುವುದೋ, ಆ ತಿಳಿವಳಿಕೆ ಅಥವಾ ಅರಿವಿನ ಆನಂದ ಸಾಗರದಲ್ಲಿ ವಿಲೀನವಾಗುವುದೋ, ಅಂತಹವರ ವಂಶವು ಪವಿತ್ರವಾಗುವುದು, ಆತನ ತಾಯಿ ಕೃತಾರ್ಥಳಾಗುವಳು; ಆತ ನಡೆದಾಡುವ ಭೂಮಿಯೂ ಕೂಡ ಪುಣ್ಯವತಿಯಾಗುವುದು."

ಒಂದು ಗಾದೆ ಮಾತಿದೆ: 'ಕಡುಬು ರುಚಿಯಾಗಿರುತ್ತದೆ ಎನ್ನುವುದಕ್ಕೆ ಸಾಕ್ಷಿ ಅದನ್ನು ತಿನ್ನುವುದಲ್ಲದೆ ಬೇರಲ್ಲ.' ದೈವಸಾಕ್ಷಾತ್ಕಾರವನ್ನು ಹೊಂದಿರುವ ಜೀವನ್ಮುಕ್ತನ ಬಾಹ್ಯಲಕ್ಷಣಗಳೇನು? ಅದಕ್ಕಿಂತಲೂ ಮುಖ್ಯವಾಗಿ, ಸಾಧನೆಯ ಮಾರ್ಗವನ್ನು ಕ್ರಮಿಸುತ್ತಿರುವ ಸಾಧಕನು ಯಾವ ರೀತಿ ನಡೆದುಕೊಳ್ಳಬೇಕು? ಹೊರಗಿನ ಸಾಮಾಜಿಕ ಪರಿಸ್ಥಿತಿಗಳ ಪ್ರಭಾವಕ್ಕೆ ಒಳಗಾಗಿರುವ ಸಾಮಾನ್ಯ ವ್ಯಕ್ತಿಯೊಬ್ಬನಲ್ಲಿ ಆಧ್ಯಾತ್ಮಿಕತೆಯು ಹೇಗೆ ಮೂಡುವುದು? ಒಂದು ಉನ್ನತ ಆಧ್ಯಾತ್ಮಿಕ ಆದರ್ಶಕ್ಕೆ ತಮ್ಮ ಇಡೀ ಬದುಕನ್ನೇ ಸಮರ್ಪಿಸಿಕೊಂಡಿರುವ ಸಂನ್ಯಾಸಿಗಳು ನಡೆದುಕೊಳ್ಳುವ ಬಗೆ ಹೇಗೆ? ಇವುಗಳನ್ನು ಕೆಲವು ದೃಷ್ಟಾಂತಗಳ ಮೂಲಕ ತಿಳಿದುಕೊಳ್ಳುವ ಪ್ರಯತ್ನವನ್ನು ನಾವೀಗ ಮಾಡುತ್ತಿದ್ದೇವೆ.

ಆಧ್ಯಾತ್ಮಿಕ ಮೌಲ್ಯಗಳಿಗೆ ತಮ್ಮನ್ನು ತಾವು ಸಮರ್ಪಿಸಿಕೊಂಡ ಸ್ತ್ರೀಪುರುಷರು ಅವರ ಬದುಕಿನಲ್ಲಿ ಭೀಕರ ಸನ್ನಿವೇಶಗಳನ್ನೂ ಶಾಂತವಾಗಿ ಎದುರಿಸುವಂತಹ ಎದೆಗಾರಿಕೆಯನ್ನು ಬೆಳೆಸಿಕೊಳ್ಳುತ್ತಾರೆ. ಅಂಥದೊಂದು ನಿದರ್ಶನವನ್ನು ಖುದ್ದಾಗಿ ಕಾಣುವ ಅವಕಾಶ ನನಗೆ ಲಭಿಸಿತ್ತು. ಆ ಘಟನೆ ಹೀಗಿದೆ:

ಕೊಲ್ಕತಾದ ಒಬ್ಬ ಭಕ್ತೆ ಇದ್ದಕ್ಕಿದ್ದಂತೆ ತನ್ನ ಮಗನನ್ನು ಕಳೆದುಕೊಂಡರು. ಸೀನಿಯರ್ ಕೇಂಬ್ರಿಡ್ಜ್ ಪರೀಕ್ಷೆಗೆ (ಈಗಿನ ೧೨ ನೆಯ ತರಗತಿ) ತಯಾರಿ ನಡೆಸುತ್ತಿದ್ದ ಅವನು, ಈಜಲು ಹೋದವನು, ನೀರಿನಲ್ಲಿ ಮುಳುಗಿ ಸತ್ತುಹೋದ. ಆ ಭಕ್ತೆಗೆ ಶ್ರೀರಾಮಕೃಷ್ಣ ಮತ್ತು ಶ್ರೀಶಾರದಾದೇವಿಯವರಲ್ಲಿ ಅಪಾರ ವಿಶ್ವಾಸ, ಭಕ್ತಿ. ಆದರೂ ತನ್ನದೇ ಆದ ಕರುಳ ಕುಡಿ ಕಾಣದೂರಿಗೆ ನಡೆದಾಗ, ಆಕೆಗೆ ಹೇಗಾಗಿರಬೇಡ? ನಾನು ಆ ಘಟನೆಯ ಬಗ್ಗೆ ಕೇಳಿ ತಿಳಿದಾಗ, ಆ ತಾಯಿ ಸಂಕಷ್ಟದ ಅಂಚಿನಲ್ಲಿದ್ದಾರೆಂದು ನನಗನ್ನಿಸಿತು. ಸಾಂತ್ವನ ಹೇಳೋಣವೆಂದು, ನಾನೇ ಆಕೆಯ ಮನೆಗೆ ಹೋದೆ. ಅಲ್ಲಿ ನನಗೊಂದು ಅಚ್ಚರಿ ಕಾದಿತ್ತು! ನಾನು ಅವರಿಗೆ ಸಾಂತ್ವನ ಹೇಳುವ ಬದಲು, ಅವರೇ ನನ್ನನ್ನು ಹೀಗೆ ಸಮಾಧಾನ ಪಡಿಸಲು ಯತ್ನಿಸಿದರು: "ದೇವರು ಕೊಟ್ಟ; ಹಾಗೆಯೇ ಅವನೇ ಕಿತ್ತುಕೊಂಡ; ದುಃಖಿಸುವುದರಿಂದ ಏನು ಪ್ರಯೋಜನ?" ಈ ಬಗೆಯ ನಿರ್ಲಿಪ್ತ ನಿಲುವು ಆಕೆಗೆ ಸಾಧ್ಯವಾಗಿದ್ದು ಹೇಗೆ? ದಿವ್ಯತ್ರಯರಲ್ಲಿ ಗಾಢವಿಶ್ವಾಸ ಮತ್ತು ಭಕ್ತಿ ಇದ್ದುದರಿಂದಲೇ.

ಹೀಗೆ ಆಧ್ಯಾತ್ಮಿಕ ಪ್ರವೃತ್ತಿಯು ಪ್ರಾಪಂಚಿಕ ವಿಚಾರಗಳಲ್ಲಿ ನಿರ್ಲಿಪ್ತತೆಯನ್ನು ಬೆಳೆಸಿಕೊಳ್ಳಲು ನೆರವಾಗುತ್ತದೆ; ಐಹಿಕ ಭೋಗಗಳಲ್ಲಿ ವೈರಾಗ್ಯವನ್ನು ವೃದ್ಧಿಸುತ್ತದೆ. ಇಲ್ಲಿ ಅವಿವಾಹಿತರಾಗಿದ್ದ ವೈದ್ಯರೊಬ್ಬರ ವಿಚಾರವನ್ನು ನಾನು ಪ್ರಸ್ತಾಪಿಸುತ್ತೇನೆ. ಅವರ ಹೆಸರು ಡಾ. ಜಿತೇನ್ ದತ್ತ ಎಂದು. ೧೯೫೦ ನೆಯ ಇಸವಿಯ ಉತ್ತರಾರ್ಧದಲ್ಲಿ ನನಗೆ ಅವರ ಪರಿಚಯವಾಯಿತು. ಅವರು ದೃಢಮನಸ್ಕರು. ಆದರೆ, ದೀನದಲಿತರನ್ನು ಕಂಡರೆ, ಅವರ ಹೃದಯ ಕರಗಿಹೋಗುತ್ತಿತ್ತು; ಅಂತಹವರನ್ನು ಕಂಡರೆ ಮರುಗಿ, ನೆರವು ನೀಡುತ್ತಿದ್ದರು. ಕೊಲ್ಕತಾದಲ್ಲಿ ರೋಗಿಗಳ ತಪಾಸಣೆ ಮಾಡಲು ಅವರು ಹೋಗುತ್ತಿದ್ದರು. ರೋಗಿಗಳಿಂದ ಚಿಕಿತ್ಸೆಗೆ ಪಡೆದ ಹಣವನ್ನು ಬಂಗಾಳದ ಗ್ರಾಮೀಣ ಪ್ರದೇಶದಲ್ಲಿ ರಾಮಕೃಷ್ಣ ಮಿಷನ್ ನಡೆಸುತ್ತಿರುವ ಬಾಲಕಿಯರ ಶಾಲೆಯೊಂದಕ್ಕೆ ದಾನವಾಗಿ ನೀಡುತ್ತಿದ್ದರು. ರೋಗಿಗಳಿಂದ ಪಡೆದ ಹಣಕ್ಕೆ ನೇರವಾಗಿ ಆಶ್ರಮದ ದೇಣಿಗೆಯ ರಸೀದಿಯನ್ನೇ ಅವರಿಗೆ ನೀಡುವರು! ಇದರಿಂದ ಆ ರೋಗಿಗಳೇ ದಾನಿಗಳೆಂಬಂತೆ ಭಾಸವಾಗುತ್ತಿತ್ತು. ಈ ರೀತಿ ಡಾ. ದತ್ ಅವರು, ನಾವು ನಡೆಸುತ್ತಿರುವ ಆ ಶಾಲೆಗೆ, ಒಂದು ಲಕ್ಷ ರೂಪಾಯಿಗಳಿಗೂ ಹೆಚ್ಚು ಮೊತ್ತವನ್ನು ದಾನ ಮಾಡಿದ್ದರು! ಈಗಿನ ದಿನಗಳಲ್ಲಿ ಅದರ ಮೌಲ್ಯ ಹತ್ತು ಪಟ್ಟು ಹೆಚ್ಚು!

ಈಗ ನಾನು ನಮ್ಮಲ್ಲಿನ ಒಬ್ಬರು ಸ್ವಾಮಿಗಳ ಬಗ್ಗೆ ಹೇಳುತ್ತೇನೆ. ಅವರೇನು ವಿಖ್ಯಾತರಾದವರಲ್ಲ, ಆದರೆ ತಮ್ಮ ಸರಳ ಹಾಗೂ ಪ್ರೀತಿಯ ಸ್ವಭಾವದಿಂದ, ಅವರ ಸಂಪರ್ಕಕ್ಕೆ ಬಂದ ಎಲ್ಲರ ಪ್ರೀತಿ

ಪರಮಪೂಜ್ಯ ಸ್ವಾಮೀಜಿಯವರು ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರು; ಶಾಸ್ತ್ರಗಳಲ್ಲಿ ಆಳವಾದ ಪಾಂಡಿತ್ಯವುಳ್ಳವರು ಮತ್ತು ಉತ್ತಮ ಭಾಷಣಕಾರರು.

ಮತ್ತು ಗೌರವಗಳಿಗೆ ಪಾತ್ರರಾಗಿದ್ದರು. ಅವರ ಹೆಸರು ಸ್ವಾಮಿ ವಿರೇಶಾನಂದಜಿ (ದ್ವಾರಕಾ ಮಹಾರಾಜ್) ಎಂದು. ಅವರು ತಮ್ಮ ಬಹುಪಾಲು ಸಂನ್ಯಾಸೀ ಜೀವನವನ್ನು ಬೇಲೂರು ಮಠದಲ್ಲಿಯೇ ಕಳೆದರು. ಅವರು ಸ್ವಾಮಿ ಶಿವಾನಂದಜಿ (ಮಹಾಪುರುಷ ಮಹಾರಾಜ್, ರಾಮಕೃಷ್ಣ ಮಹಾಸಂಘದ ದ್ವಿತೀಯ ಅಧ್ಯಕ್ಷರು) ಅವರ ಶಿಷ್ಯರು. ಅವರು ಹಳೆಯ ಮಠದ ಕಟ್ಟಡದ ಮೇಲಿನ ಮಹಡಿಯಲ್ಲಿದ್ದರು. ಅಲ್ಲೇ ಸ್ವಾಮಿ ವಿವೇಕಾನಂದರು ತಮ್ಮ ಕಡೆಯ ದಿನಗಳನ್ನು ಕಳೆದದ್ದು.

ಅಲ್ಲೇ ಕೆಳಗಿನ ಅಂಗಣದಲ್ಲಿ ಇರುವ ಮಾವಿನ ಮರ ಸ್ವಾಮಿ ವಿವೇಕಾನಂದರ ಕಾಲದಿಂದಲೂ ಇರುವಂಥದ್ದು. ಹತ್ತಿರದಲ್ಲಿಯೇ ಒಂದು ಹಲಸಿನ ಮರವೂ ಇದೆ ಹಾಗೂ ಇನ್ನಿತರ ಗಿಡಗಳೂ ಇವೆ. ದ್ವಾರಕಾ ಮಹಾರಾಜರ ಗುರುಗಳಾದ ಸ್ವಾಮಿ ಶಿವಾನಂದರು ಅವರಿಗೆ, ಮರಗಳಿಂದ ಬಿದ್ದ ಚೂರುಪಾರು ಕೊಳೆತ ಎಲೆಗಳು ಸ್ಥಳವನ್ನು ಗಲೀಜು ಮಾಡದಂತೆ, ಅಂಗಳವನ್ನು ಸದಾ ಶುಚಿಯಾಗಿಡಲು ಹೇಳಿದ್ದರು.

ದ್ವಾರಕಾ ಮಹಾರಾಜರು ರಾಮಾಯಣದಲ್ಲಿ ಬರುವ ತಪಸ್ವಿನಿ ಶಬರಿಯ ಬಗ್ಗೆ ಓದಿದ್ದರು. ಶಬರಿ ಕಾಡಿನಲ್ಲಿ ಸಂಚರಿಸುತ್ತ ಶ್ರೀರಾಮನು ತನ್ನ ಗುಡಿಸಿಲಿನ ಮುಂದೆ ಹಾಯ್ದು ಹೋಗುತ್ತಾನೆ ಎಂದು ಕೇಳಿದ್ದಳು. ಶ್ರೀರಾಮನ ದರ್ಶನಭಾಗ್ಯವನ್ನು ಪಡೆಯಲು ಅವಳು ತಿಂಗಳುಗಟ್ಟಲೆ, ವರ್ಷಗಟ್ಟಲೆ ಕಾದಳು. ಆತನ ಹೆಜ್ಜೆಯ ಸಪ್ಪಳವನ್ನು ಕೇಳಲೆಂದೇ ಭಕ್ತೆ ಶಬರಿ ಕುತೂಹಲದಿಂದ ಕಾಯುತ್ತಿದ್ದಳು! ಕೊನೆಗೂ ಶ್ರೀರಾಮ ಬಂದನು; ಶಬರಿ ಅವನಿಗಾಗಿ ಮೀಸಲಿರಿಸಿದ್ದ ಹಣ್ಣುಗಳನ್ನು ಸವಿದನು; ಆಕೆಯ ಬಹು ಕಾಲದ ಬಯಕೆ ಈಡೇರಿತು.

ಅದೇ ರೀತಿಯಲ್ಲಿ, ದ್ವಾರಕಾ ಮಹಾರಾಜ್ ಕೂಡ ತಾವು ಅಲ್ಲಿ ವಾಸಿಸುತ್ತಿರುವವರೆಗೂ, ಅಂಗಳದಲ್ಲಿ ಒಂದು ಚೂರೂ ಗಲೀಜು ಆಗದಂತೆ ಎಚ್ಚರ ವಹಿಸಿದ್ದರು. ಒಂದು ಎಲೆ ಚೂರು ಕೆಳಕ್ಕೆ ಉದುರಿದರೂ ಓಡಿ ಬಂದು, ಅದನ್ನು ತೆಗೆದು ಅಂಗಳವನ್ನು ಗುಡಿಸುತ್ತಿದ್ದರು. ಅಂತೂ ಅವರ ಮನಸ್ಸೆಲ್ಲಾ ತಮ್ಮ ಗುರುದೇವರಾದ ಮಹಾಪುರುಷ್ ಮಹಾರಾಜರ ಆಜ್ಞೆಯನ್ನು ಪಾಲಿಸುವುದರಲ್ಲೇ ತಲ್ಲೀನವಾಗಿ ಹೋಗಿತ್ತು.

ದ್ವಾರಕಾ ಮಹಾರಾಜ್ ಅವರು ಬಂಗಾಳಿಯ ಕಾವ್ಯರೂಪದ ರಾಮಾಯಣದಲ್ಲಿ ಬರುವ ಶಬರಿಯ ಕುರಿತಾದ ಪದ್ಯಗಳನ್ನು ಮೆಲುದನಿಯಲ್ಲಿ ಗುಣುಗುಣಿಸುತ್ತಿದ್ದುದನ್ನು ನಾನು ನೋಡಿದ್ದೇನೆ. ಶಬರಿಯ ನಿರ್ಮಲ, ಮುಗ್ಧ ಹಾಗೂ ಗಾಢ ಭಕ್ತಿಯನ್ನು ಸ್ಮರಿಸಿದಾಗಲೆಲ್ಲ, ಅವರ ಕಣ್ಣುಗಳಿಂದ ಅಶ್ರು ಒಸರಿಬರುತ್ತಿತ್ತು. ಅವರ ಕೋಣೆಯಲ್ಲಿ ಯಾರೋ ಭಕ್ತರು ನೀಡಿದ್ದ ಶಬರಿಯ ಚಿತ್ರವೂ ಇತ್ತು. ಒಂದು ಸಣ್ಣ ಕೆಲಸವೂ ಹೇಗೆ ಆಧ್ಯಾತ್ಮಿಕ ಸಾಧನೆಯಾಗಬಲ್ಲುದು ಎನ್ನುವುದಕ್ಕೆ ದ್ವಾರಕಾ ಮಹಾರಾಜರು ಒಂದು ಅಪೂರ್ವ ನಿದರ್ಶನವಾಗಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು.

ಈಗ ನಾವು, ಕ್ಯಾಥೊಲಿಕ್ ಕ್ರೈಸ್ತ ಸಂಪ್ರದಾಯದ ಒಬ್ಬ ಮಹಾತ್ಮನ ಒಂದು ಉದಾಹರಣೆಯನ್ನು ಗಮನಿಸೋಣ. ಆತನು ೧೭ ನೆಯ ಶತಮಾನದಲ್ಲಿ ಫ್ರಾನ್ಸ್ ದೇಶದಲ್ಲಿ ವಾಸಿಸುತ್ತಿದ್ದನು. ಅವನು ಮಠದ ಅಡುಗೆಯ ಮನೆಯಲ್ಲಿ ತನ್ನ ಬಿಡುವಿರದ ಕಾರ್ಯಗಳ ನಡುವೆಯೂ ಭಗವಂತನ ಸಾನ್ನಿಧ್ಯವನ್ನು ಗಾಢವಾಗಿ ಅನುಭವಿಸುತ್ತಿದ್ದನು. ಅವನ ಹೆಸರು ಬ್ರದರ್ ಲಾರೆನ್ಸ್ ಎಂದು. ಅವನ ಬಗೆಗೆ ನಾವು 'The Practice of Presence of God' ಎಂಬ ಸಣ್ಣ ಪುಸ್ತಕವನ್ನು ಓದಿ ತಿಳಿದುಕೊಳ್ಳಬಹುದು. ಆ ಪುಸ್ತಕದಲ್ಲಿ ಹೀಗೆ ಬರೆದಿದೆ:

" ಹದಿನೆಂಟನೆಯ ವರ್ಷಕ್ಕೇ ಅವನಲ್ಲಿ ಪರಿವರ್ತನೆಯಾಯಿತು. ಅದು ಒಂದು ದೃಶ್ಯವನ್ನು ನೋಡಿದ್ದರ ಫಲ. ಅಂದು ಚಳಿಗಾಲದ ನಡುಹಗಲಿನಲ್ಲಿ ಒಂದು ದಿನ, ಸುರಿಯುತ್ತಿರುವ ಮಂಜಿಗೆ ಮೈಚಾಚಿಕೊಂಡು, ಮೋಟು ಮರವೊಂದು ನಿಂತಿತ್ತು. ಅದನ್ನು ಲಾರೆನ್ಸ್ ನೋಡಿದನು. ಅದು ಆತನ ಮನಸ್ಸಿನಲ್ಲಿ, ನಂತರ ಬರುವ ಗ್ರೀಷ್ಮಕಾಲದಲ್ಲಿ ಪ್ರಕೃತಿಯು ತರುವ ಪರಿವರ್ತನೆಗಳ ಬಗ್ಗೆ ಗಾಢವಾದ ಚಿಂತನೆಗಳನ್ನು ಮೂಡಿಸಿತು. ಆ ಕ್ಷಣದಿಂದ ಅವನ ಅರಿವು ವೃದ್ಧಿಸಿತು. ಅವನಲ್ಲಿ ಭಗವತ್ ಪ್ರೇಮ ಮತ್ತು ವಿಶ್ವಾಸಗಳು ಹೆಚ್ಚಾಗುತ್ತ ಹೋದವು. ಅಂದಿನಿಂದ ಅವನು 'ಭಗವಂತನ ಸಾನ್ನಿಧ್ಯ' ದ ಬೆಳಕಿನಲ್ಲಿ ತನ್ನ ಜೀವನಪಥವನ್ನು ಕ್ರಮಿಸಲು ಶ್ರಮವಹಿಸಲಾರಂಭಿಸಿದನು."

ಹೀಗೆ ಸಹೋದರ ಲಾರೆನ್ಸ್ ಕ್ರೈಸ್ತ ಸಂನ್ಯಾಸಿ ಮಠದಲ್ಲಿ ತನ್ನ ಅನೇಕ ಕೆಲಸಕಾರ್ಯಗಳ ನಡುವೆಯೂ ಪ್ರತಿಕ್ಷಣವೂ ಭಗವಂತನ ಸಾನ್ನಿಧ್ಯವನ್ನು ಕಂಡುಕೊಂಡನು. ಹಾಗೆಯೇ ನಾವೂ ಕೂಡ. ಭಗವಂತನ ಸಾನ್ನಿಧ್ಯವನ್ನು ಪಡೆದುಕೊಳ್ಳಬೇಕೆಂದು ಅವನು ಹೇಳುತ್ತಾನೆ.

**ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೇಳುತ್ತಾನೆ. 'ಮಾಮ್ ಅನುಸ್ಮರ ಯುಧ್ಯ ಚ' – ನನ್ನನ್ನೇ ಸ್ಮರಿಸುತ್ತ ಯುದ್ಧ ಮಾಡು. ಆದ್ದರಿಂದ, ನಾವೆಲ್ಲರೂ ಭಗವಂತನನ್ನೇ ನಮ್ಮ ಜೀವನದ ಕೇಂದ್ರವನ್ನಾಗಿ ಮಾಡಿಕೊಂಡಿರಲು, ಆತನನ್ನು ಅನವರತವೂ ಸ್ಮರಣೆ ಮಾಡುವುದು ಅತ್ಯಂತ ಆವಶ್ಯಕವಾಗಿದೆ. ಅದಕ್ಕಾಗಿ ನಿರಂತರ ಪರಿಶ್ರಮ ಅಗತ್ಯ. ಈ ರೀತಿಯಲ್ಲಿ ಆ ದಿವ್ಯಚೈತನ್ಯವನ್ನು ಸ್ಮರಿಸುವ ವಿಧಾನವು ನಮ್ಮಲ್ಲಿ ಆಧ್ಯಾತ್ಮಿಕ ಉನ್ನತಿಯನ್ನು ಉಂಟುಮಾಡುತ್ತದೆ; ಅಲ್ಲದೆ, ದಿನನಿತ್ಯದ ಚಟುವಟಿಕೆಗಳಿಗೆ ಅಡ್ಡಿಯುಂಟಾಗದೆ, ಯಾವುದೇ ಕಾರ್ಯದಲ್ಲಿ ನಾವು ನಿರತರಾಗಿದ್ದರೂ ಸರಿಯೆ, ಭಗವಚ್ಚಿಂತನೆಯಲ್ಲಿ ಎಡೆಬಿಡದೆ ತೊಡಗುವಂತೆ ಪ್ರೇರೇಪಿಸುತ್ತದೆ.**

ಮೇಲಿನ ಉದಾಹರಣೆಗಳು ತೋರಿಸುವಂತೆ, ಆಧ್ಯಾತ್ಮಿಕತೆಯು ಕಾಡುಮೇಡುಗಳಿಗೆ ಮಾತ್ರವೇ ಸೀಮಿತವಾಗಿರಬೇಕಾಗಿಲ್ಲ. ಸ್ವಾಮಿ ವಿವೇಕಾನಂದರು ಹೇಳುವಂತೆ, ಆಧ್ಯಾತ್ಮಿಕತೆಯು ಮಾರುಕಟ್ಟೆ, ಹೊಲಗದ್ದೆ, ಕಾರ್ಖಾನೆಗಳನ್ನೂ ಪ್ರವೇಶಿಸಬೇಕು. ನಾವು ಎಲ್ಲಿದ್ದರೆ ಅಲ್ಲಿಯೇ ಆಧ್ಯಾತ್ಮಿಕತೆಯ ಕಂಪನ್ನು ಅನುಭವಿಸಲು ನಮಗೆ ಸಾಧ್ಯವಾಗಬೇಕು. ಯಾವಾಗ ನಮ್ಮ ಪ್ರತಿ ಚಟುವಟಿಕೆಯೂ ಆಧ್ಯಾತ್ಮಿಕತೆಯ ಸೊಗಡಿನಿಂದ ತುಂಬಿ ತುಳುಕಾಡುವುದೋ ಆಗ ನಮ್ಮಲ್ಲಿ ನೀರವಕ್ರಾಂತಿಯೊಂದು ಉಂಟಾಗುತ್ತದೆ. ಇದನ್ನು ಸಾಧಿಸಲು ಸತತ ಪರಿಶ್ರಮಿಸುವುದು ಅತ್ಯಂತ ಅವಶ್ಯಕ.